**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **18/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **04**
ಸಿ.ಡಬ್ಲ್ಯೂ ನಂಃ **08**
ಸಾಕ್ಷಿಯನ್ನು ದಿನಾಂಕಃ **28-08-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ರಂಗಪ್ಪ
ತಂದೆಯ ಹೆಸರು ಃ ರಂಗಪ್ಪ
ವಯಸ್ಸು ಃ 45 ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸ ಸ್ಥಳ ಃ ಗುಡ್ಡದ ದೇವಲಾಪುರ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತು ಅವರು ನಮ್ಮ ಊರಿನವರು. 1 ನೇ ಆರೋಪಿ ಚಾಸಾ 1 ರವರ ಗಂಡ. ಅವರ ಮದುವೆ ಯಾವಾಗ ಆಯಿತು ಎಂದು ಗೊತ್ತಿಲ್ಲ. ಮದುವೆಯಾದ ನಂತರ ಅವರು ಚೆನ್ನಾಗಿದ್ದರು. ಆ ನಂತರ ಮನೆಯಲ್ಲಿ ಬಡಿದಾಟ ಆಯಿತು ಆದರೆ ಆ ವಿಚಾರ ನನಗೆ ಗೊತ್ತಿಲ್ಲ. ಅವರಿಗೆ ಇಬ್ಬರು ಮಕ್ಕಳು. ಅವರ ಮಧ್ಯ ಆದ ಜಗಳದ ಬಗ್ಗೆ ಮತ್ತು ಜೀವ ಬೆದರಿಕೆ ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ಗಲಾಟೆ ಶಬ್ದ ಕೇಳಿ ಅವರ ಮನೆಯೊಳಗೆ ಹೋಗಿ ನೋಡಿರಲಿಲ್ಲ ಹಾಗೂ ಜಗಳ ಬಿಡಿಸಿರಲಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಚಾಸಾ 1 ಕೊಟ್ಟಿರುವ ದೂರಿನ ಬಗ್ಗೆ ನನಗೆ ಗೊತ್ತಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

2). 1 ನೇ ಆರೋಪಿ ಈರಪ್ಪ ಮತ್ತು ಚಾಸಾ 1 ರ ವರ ಮದುವೆ ಸುಮಾರು 20 ವರ್ಷಗಳ ಹಿಂದೆ ಆಗಿತ್ತು ಇರಬಹುದು. ಮದುವೆಯಾದ ನಂತರ ಸ್ವಲ್ಪ ದಿನ ಚೆನ್ನಾಗಿದ್ದು ಆ ನಂತರ ಕಿರುಕುಳ ಕೊಡಲು ಪ್ರಾರಂಭಿಸಿದರು ಎಂದರೆ ನನಗೆ ಗೊತ್ತಿಲ್ಲ. ನಿನಗೆ ಚೆನ್ನಾಗಿ ಅಡುಗೆ ಮಾಡಲು ಬರುವುದಿಲ್ಲ, ನೀನು ನಮ್ಮ ಮನೆಗೆ ತಕ್ಕ ಸೊಸೆ ಅಲ್ಲ ನಿಮ್ಮ ಮನೆಯವರು ವರದಕ್ಷಿಣೆಯಾಗಿ ಏನೂ

ಕೊಟ್ಟಿರುವುದಿಲ್ಲ, **50** ಸಾವಿರ ರೂ. ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಪೀಡಿಸಿ ಹೊಡೆ-ಬಡಿ ಮಾಡಿದ್ದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ ಇನ್ನೊಂದು ಮದುವೆ ಆಗುವುದಾಗಿ **1**ನೇ ಆರೋಪಿ ಚಾಸಾ **1** ರವರಿಗೆ ಮಾನಸಿಕ ಹಿಂಸೆ ನೀಡುತ್ತಿದ್ದ ಎಂದರೆ ಸರಿಯಲ್ಲ.

**3).** ದಿಃ **8-8-2016** ರಂದು ಮಧ್ಯಾಹ್ನ **12** ಗಂಟೆಗೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ **1**ನೇ ಆರೋಪಿ ಮತ್ತು ಚಾಸಾ **1** ಅವರ ಮನೆಯಲ್ಲಿ ಜಗಳ ಮಾಡುತ್ತಿದ್ದ ಶಬ್ದ ಕೇಳಿಸಿತ್ತು ಎಂದರೆ ಸರಿಯಲ್ಲ. ಅಲ್ಲಿಗೆ ಹೋಗಿ ನೋಡಿದಾಗ ವರದಕ್ಷಿಣೆ ತೆಗೆದುಕೊಂಡು ಬರದೇ ಇದ್ದಲ್ಲಿ ಇನ್ನೊಂದು ಮದುವೆಯಾಗುವುದಾಗಿ **1**ನೇ ಆರೋಪಿ ಹೇಳುತ್ತಿದ್ದ ಎಂದರೆ ಸರಿಯಲ್ಲ. ನಿನ್ನನ್ನು ಮುಗಿಸಿಬಿಡುತ್ತೇನೆ ಎಂದು ಆಕೆಯ ಎಡಗೈಯನ್ನು ತಿರುಚಿದ ಎಂದರೆ ಸರಿಯಲ್ಲ. ಆಕೆಯ ತಲೆಕೂದಲನ್ನು ಇತರೆ ಆರೋಪಿಗಳು ಹಿಡಿದು ಎಳೆದಾಡಿದರು ಎಂದರೆ ಸರಿಯಲ್ಲ. ಆಗ **1**ನೇ ಆರೋಪಿ ಚಾಸಾ **1** ರವರಿಗೆ ಒದ್ದ ಎಂದರೆ ಸರಿಯಲ್ಲ. **1**ನೇ ಆರೋಪಿ ಕೊಡ್ಲಿಯಿಂದ ನಿನ್ನನ್ನು ಸಾಯಿಸುತ್ತೇನೆ ಎಂದು ಚಾಸಾ **1** ರವರಿಗೆ ಹೊಡೆದಿದ್ದು ಆಕೆ ಸರಿದಾಗ ಅದು ಬಾಗಿಲಿಗೆ ಬಿದ್ದು ಅದು ತುಂಡು ತುಂಡಾದವು ಎಂದರೆ ಸರಿಯಲ್ಲ. ಅಲ್ಲಿದ್ದ ನಾನು ಮತ್ತು ಇತರರು ಜಗಳ ಬಿಡಿಸಿ ಕಳುಹಿಸಿದೆವು ಎಂದರೆ ಸರಿಯಲ್ಲ. ಚಾಸಾ **1** ರವರನ್ನು ಆರೋಪಿಗಳು ಹೊರಗೆ ಹಾಕಿ ಪುನಃ ನೀನು ಮನೆಗೆ ವಾಪಸ್ ಬಂದಲ್ಲಿ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ಚಾಸಾ **1** ದೂರು ಕೊಟ್ಟಿದ್ದು ಇವೆಲ್ಲಾ ವಿಚಾರಗಳು ನನಗೆ ಗೊತ್ತಿವೆ ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ನಾನು "ನಮ್ಮೂರ ಶರಣಪ್ಪನ ಮಗಳು . . . . ನನಗೆ ಗೊತ್ತಾಗಿರುತ್ತದೆ " ಎಂದು ನಿಪಿ **5** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಪಕ್ಕದ ಮನೆಯವರಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಕೆ ಡಿ ವಕೀಲರಿಂದ

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ